## ಶ್ರೀ ಸುತ್ತೂರು ಮಠ

ಚಾಮುಂಡಿಬೆಟ್ಟದ ತಪ್ಪಲು, ಮೈಸೂರು

# ಬೆಳದಿಂಗಳ ಸಂಗೀತ 236

**19 ನವೆಂಬರ್ 2021 * ಶುಕ್ರವಾರ * ಸಂಜೆ 6.00**

ದಿವ್ಯ ಸಾನ್ನಿಧ್ಯ

**ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು**

ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಸುತ್ತೂರು ಶ್ರೀಕ್ಷೇತ್ರ

**ಗಾಯನ**



ವಿದುಷಿ ಮಹತೀ ರಘುರಾಮ್



ವಿದುಷಿ ಸಿ.ವಿ. ಶ್ರುತಿ
ವಯೊಲಿನ್



ವಿದ್ವಾನ್ ನಂದನ್ ಕಶ್ಯಪ್
ಮೃದಂಗ

ಸರ್ವರಿಗೂ ಹಾರ್ದಿಕ ಸ್ವಾಗತ

ಆನ್‌ಲೈನ್ ಮೂಲಕವೂ ವೀಕ್ಷಿಸಬಹುದು

YouTube http://Youtube.com/c/JSSMahavidyapeethaonline

LIVE https://www.facebook.com/JSSMVP

LIVE STREAMING

**ವಿದುಷಿ ಮಹತೀ ರಘುರಾಮ್‌ರವರು** ಕರ್ನಾಟಕ ಸಂಗೀತದ ಉದಯೋನ್ಮುಖ ಕಲಾವಿದರಲ್ಲಿ ಭರವಸೆ ಮೂಡಿಸುತ್ತಿರುವ ಪ್ರತಿಭಾವಂತರು. ಮೈಸೂರಿನ ಹಳೆಯ ತಲೆಮಾರಿನ ಖ್ಯಾತ ವೇಣುವಾದಕ ವಿದ್ವಾನ್ ವಿ. ದೇಶಿಕಾಚಾರ್‌ರವರ ಮೊಮ್ಮಗಳು. ಇಡೀ ಕುಟುಂಬ ಸಂಗೀತ ವಿದ್ವಾಂಸರಿಂದ ಕೂಡಿದ್ದು, ಐದನೆಯ ವರ್ಷದಿಂದಲೇ ವಿದುಷಿ ಡಾ. ಆರ್.ಎನ್. ಶ್ರೀಲತಾರವರ ಬಳಿ ಸಂಗೀತ ಕಲಿಯುತ್ತಿದ್ದಾರೆ. ಅಭಿಜಾತ ಸಾಧಕರು. ಮೈಸೂರು, ಬೆಂಗಳೂರು, ಮಂಗಳೂರಿನ ಹಲವಾರು ಪ್ರತಿಷ್ಠಿತ ಸಂಗೀತ ವೇದಿಕೆಗಳಲ್ಲಿ ಕಾರ್ಯಕ್ರಮ ನೀಡಿರುವರು. ಕೇರಳ ಮತ್ತು ಅಮೆರಿಕದಲ್ಲೂ ಇವರ ನಾದ ಕೈಂಕರ್ಯ ನಡೆದಿದೆ. ಮೈಸೂರಿನ ಗಾನಭಾರತಿ ಸಂಸ್ಥೆಯಿಂದ ಕರ್ನಾಟಕ ಸಂಗೀತ ಮತ್ತು ದಾಸರ ಪದಗಳ ಹಾಡುಗಾರಿಕೆಯಲ್ಲಿ ಪ್ರಥಮ ಬಹುಮಾನ; ಬೆಂಗಳೂರಿನ ನಾದಸುರಭಿ ಸಭಾ, ಕಲಾಸೌರಭ–2020 ಮತ್ತು ಮೈಸೂರಿನ ಶ್ರುತಿಮಂಜರಿ ಪ್ರತಿಷ್ಠಾನಗಳು ನಡೆಸಿದ ಗಾಯನ ಸ್ಪರ್ಧೆಗಳಲ್ಲಿ ಪ್ರಥಮ ಬಹುಮಾನಗಳ ಪುರಸ್ಕೃತರು. ರಾಗಗಳನ್ನು ಗುರುತಿಸುವ ಸ್ಪರ್ಧೆಯಲ್ಲೂ ಮೊದಲನೆಯ ಬಹುಮಾನ ಪಡೆದಿರುವರು.

**ವಿದುಷಿ ಸಿ.ವಿ. ಶ್ರುತಿಯವರು** ಸಂಗೀತದ ಕೌಟುಂಬಿಕ ಹಿನ್ನೆಲೆಯಿಂದಲೇ ಬಂದವರು. ಖ್ಯಾತ ವಯೊಲಿನ್ ವಿದ್ವಾಂಸರಾದ ಶ್ರೀ ಎಚ್.ಕೆ. ನರಸಿಂಹಮೂರ್ತಿಯವರ ಬಳಿ ಸುಮಾರು ಹತ್ತು ವರ್ಷಗಳ ಶಿಷ್ಯವೃತ್ತಿ. ಹಾಡುಗಾರಿಕೆಯನ್ನೂ ಕಲಿತಿದ್ದಾರೆ. ಇವರು ಹಲವಾರು ಸಂಗೀತಸಭೆಗಳು

ಹಾಗು ಇಸ್ಕಾನ್ ಸಂಸ್ಥೆ ಆಯೋಜಿಸಿದ್ದ ಸ್ಪರ್ಧೆಗಳಲ್ಲಿ ಭಾಗವಹಿಸಿ ಬಹುಮಾನ ಗಳಿಸಿದ್ದಾರೆ. ನಾದಕಿಶೋರೋತ್ಸವ–2019ರಲ್ಲಿ ಉತ್ತಮ ಪಕ್ಕವಾದ್ಯಗಾರ್ತಿ ಪುರಸ್ಕಾರ; ಕರ್ನಾಟಕ ಸಂಗೀತ ನೃತ್ಯ ಅಕ್ಯಾಡೆಮಿಯ ಶಿಷ್ಯವೇತನ; ಮೈಸೂರು ಆಕಾಶವಾಣಿಯಲ್ಲಿ "ಬಿ" ಶ್ರೇಣಿ ಕಲಾವಿದರ ಸ್ಥಾನಮಾನ ಗಳಿಸಿದ್ದಾರೆ.

**ವಿದ್ವಾನ್ ನಂದನ್ ಕಶ್ಯಪ್‌ರವರು** ಹದಿಮೂರು ವರ್ಷಗಳಿಂದ ಮೈಸೂರಿನ ಮೃದಂಗ ವಿದ್ವಾನ್ ಶ್ರೀ ವಿ.ಎಸ್. ರಮೇಶ್‌ರವರ ಬಳಿ ಶಿಷ್ಯರಾಗಿದ್ದಾರೆ. ಹಲವಾರು ಸಂಗೀತ ಸ್ಪರ್ಧೆಗಳಲ್ಲಿ ಬಹುಮಾನ ಗಳಿಸಿದ್ದಾರೆ. ಕಳೆದ ಏಳು ವರ್ಷಗಳಿಂದ ಸಾರ್ವಜನಿಕ ಕಾರ್ಯಕ್ರಮ ನೀಡುತ್ತಿದ್ದಾರೆ. ಕರ್ನಾಟಕ, ತಮಿಳುನಾಡು, ಕೇರಳ ಮತ್ತು ಆಂಧ್ರಪ್ರದೇಶ ಮುಂತಾದ ಕಡೆಗಳಲ್ಲಿ ಕಲಾಪರಿಣತಿಯನ್ನು ಪ್ರದರ್ಶಿಸಿದ್ದಾರೆ. ಹಲವಾರು ಜುಗಲಬಂದಿ ಕಾರ್ಯಕ್ರಮಗಳನ್ನೂ ನೀಡಿದ್ದಾರೆ.

# ಬೆಳದಿಂಗಳ ಸಂಗೀತ 237

## 19 ಡಿಸೆಂಬರ್ 2021

## ಕೊಳಲು ವಾದನ



**ಕೊಳಲು**

**ವಿದ್ವಾನ್ ವಿ. ವಂಶೀಧರ್**

**ವಯೊಲಿನ್**

**ವಿದ್ವಾನ್ ಮೈಸೂರು ಎನ್. ಕಾರ್ತಿಕ್**





**ಮೃದಂಗ**

**ವಿದ್ವಾನ್ ಎಚ್.ಎಲ್. ಶಿವಶಂಕರಸ್ವಾಮಿ**

ಫೋನ್: 0821–2548221, 2548223 * ಇಮೇಲ್: sutturmath@jssonline.org